# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/**168**/2020–21

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು–560076, ದಿನಾಂಕ: **20/03/2021**

## 188 ಬಿಳೇಕಹಳ್ಳಿ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ದಿನಾಂಕ:– 20/03/2021 ಬೆಳಿಗ್ಗೆ 10:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸದಸ್ಯರು:–**

1. ಶ್ರೀ ಅಂಜಿನಪ್ಪ ಸಿ.ಟಿ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಗಿರೀಶ್ ಕೆ – ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ವಾರ್ಡ್–188
3. ಶ್ರೀಮತಿ ಶೃತಿ ರಾವ್ – ಸಾರ್ವಭೌಮ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
4. ಶ್ರೀ ರಮೇಶ್ ಶೆಟ್ಟಿ – ಎಂ.ಎಸ್.ಆರ್.ಎಸ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
5. ಶ್ರೀ ಕೆ.ವಿ ಶೆಟ್ಟಿ – ವಿಜಯಾ ಎನ್‌ಕ್ಲೇವ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:–**

1. ಶ್ರೀ ಅಮಿತ್ ಕುಮಾರ್ – ಸಹಾಯಕ ಅಭಿಯಂತರರು (BESCOM).
2. ಶ್ರೀ ರಮೇಶ್ – ಕಂದಾಯ ಪರಿವೀಕ್ಷಕರು.
3. ಶ್ರೀ ಪ್ರಕಾಶ್ ವೈ – ಆರೋಗ್ಯ ಪರಿವೀಕ್ಷಕರು.
4. ಶ್ರೀ ಹನುಮಂತರಾಯ – ತೋಟಗಾರಿಕೆ ಇಲಾಖೆ.
5. ಶ್ರೀ ಹರ್ಷವರ್ಧನ್ – ಅರಣ್ಯ ಇಲಾಖೆ (ನಗರ).
6. ಜಯಪಾಲ್ – ಮಾರ್ಷಲ್.

ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿ ವಾರ್ಡ್–188 ಬಿಳೇಕಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- **ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ.**

ರಂಕಾ ಕಾಲೋನಿಯ ಮುಖ್ಯರಸ್ತೆಯಲ್ಲಿ ಬರುವ ಖಾಲಿ ನಿವೇಶನದಲ್ಲಿರುವ ಡೆಬ್ರೀಸ್ ತೆಗೆಯಬೇಕಾಗಿ ವಾರ್ಡ್ ಸದಸ್ಯರಾದ ಶ್ರೀ ಸುರೇಶ್ ಪ್ರಕಾಶ್ ರವರು ದೂರವಾಣಿ ಮೂಲಕ ತಿಳಿಸಿದರು. ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಆರೋಗ್ಯ ಪರಿವೀಕ್ಷಕರಾದ ಶ್ರೀ ಪ್ರಕಾಶ್ ರವರಿಗೆ ಸೂಚಿಸಿದಾಗ ಶ್ರೀ ಪ್ರಕಾಶ್ ರವರು 28 ಜನ ಪೌರಕಾರ್ಮಿಕರ ಕೊರತೆ ಇರುವುದಾಗಿ ತಿಳಿಸಿ ಇದರಿಂದಾಗಿ ಸಕ್ರಮವಾಗಿ ಕಸ ವಿಲೇವಾರಿ ಹಾಗೂ ವಾರ್ಡ್ ಶುಚೀಕರಣಕ್ಕೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.

ಮುಂದುವರೆದು, ಡಾಲರ್ಸ್ ಕಾಲೋನಿ ಮತ್ತು ರಂಕಾ ಕಾಲೋನಿಗಳಲ್ಲಿ ಡೆಬ್ರೀಸ್‌ಗಳನ್ನು ರಾತ್ರೋರಾತ್ರಿ ಅಪರಿಚಿತ ವ್ಯಕ್ತಿಗಳು ಮಾರ್ಷಲ್‌ಗಳ ಗಮನಕ್ಕೂ ಬಾರದಂತೆ ವಿಲೇವಾರಿ ಮಾಡುತ್ತಿದ್ದು ಸದರಿ ಡೆಬ್ರೀಸ್‌ಗಳನ್ನು ತೆರವುಗೊಳಿಸುವಂತೆ ಶ್ರೀ ಸುರೇಶ್ ಪ್ರಕಾಶ್ ರವರು ದೂರವಾಣಿ ಮೂಲಕ ತಿಳಿಸಿದರು. ಇದಕ್ಕೆ ಅವಶ್ಯಕ ಜೆ.ಸಿ.ಬಿ ಹಾಗೂ ಟ್ರಾಕ್ಟರ್‌ಗಳು 2 ದಿನಗಳ ಮಟ್ಟಿಗೆ ಅವಶ್ಯಕವಿದ್ದು, ಇಂಗಿನಿಯರಿಂಗ್ ವಿಭಾಗ ಒದಗಿಸಿದಲ್ಲಿ ಕ್ರಮವಾಗಿ ಡೆಬ್ರೀಸ್‌ಗಳನ್ನು ಹೊರಸಾಗಿಸಬಹುದಾಗಿ ಸಭೆಯ ಗಮನಕ್ಕೆ ತಂದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಕೆ ಗಿರೀಶ್ ಉತ್ತರಿಸುತ್ತಾ ಸಿಲ್ಟ್ & ಟ್ರಾಕ್ಟರ್‌ನ ಕಾರ್ಯಾವಧಿ ಮುಗಿದಿದ್ದು ಪರ್ಯಾಯವಾಗಿ ಬೇರೆ ವ್ಯವಸ್ಥೆ ಕಲ್ಪಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಶೃತಿ ರಾವ್ ಸಾರ್ವಭೌಮ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಹಲವಾರು ರಸ್ತೆಗಳಲ್ಲಿ ಒಣಗಿದ ಮರದ ಎಲೆಗಳು ರಾಶಿ ರಾಶಿಯಾಗಿ ಬಿದ್ದಿರುವುದಾಗಿ, ರಸ್ತೆ ಬಧಿಯ ಪಾದಚಾರಿ ಮಾರ್ಗಗಳಲ್ಲಿ ಒಣಗಿದ ಮರದ ಕೊಂಬೆಗಳನ್ನು ಬಿಸಾಡಿರುವುದಾಗಿ ತಿಳಿಸಿ ತುರ್ತಾಗಿ ಅವುಗಳನ್ನು ಕಸ ವಿಲೇವಾರಿ ವಿಭಾಗದಿಂದ ಎತ್ತುವಳಿ ಮಾಡಲು ಕೋರಿದರು ಹಾಗೂ ಸಾರ್ವಬೌಮನಗರ ಪ್ರದೇಶ ವ್ಯಾಪ್ತಿಯ ರಸ್ತೆ ಬಧಿಗಳಲ್ಲಿ ಅನಧಿಕೃತವಾಗಿ ಬಹಳ ತಿಂಗಳುಗಳಿಂದ ದ್ವಿಚಕ್ರ ಹಾಗೂ ಕಾರ್‌ಗಳನ್ನು ಪಾರ್ಕ್ ಮಾಡಲಾಗಿದ್ದು ಇದರಿಂದ ಸುಲಭ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದ್ದು ಅವುಗಳನ್ನು ಟ್ರಾಫಿಕ್ ಪೋಲಿಸ್ ವಿಭಾಗಕ್ಕೆ ಮಾಹಿತಿ ನೀಡಿ ಎತ್ತುವಳಿ ಮಾಡಿಸಲು ಕೋರಿದರು ಇದಕ್ಕೆ ಸಭೆ ಮುಗಿದ ನಂತರ ಸಹಾಯಕ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರು ಖುದ್ದಾಗಿ ಸಾರ್ವಬೌಮನಗರ ಸುತ್ತಮುತ್ತಲಿನ ಪ್ರದೇಶ ಪರಿಶೀಲಿಸಿ ತುರ್ತು ಕ್ರಮ ಅನುಸರಿಸುವುದಾಗಿ ತಿಳಿಸಿದರು.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

ಬಿಳೇಕಹಳ್ಳಿಯ ಸಂಪೂರ್ಣ ವಾರ್ಡ್ ವ್ಯಾಪ್ತಿಯಲ್ಲಿ ಬೀಧಿ ದೀಪಗಳು ಅಲ್ಲಲ್ಲಿ ಉರಿಯುತ್ತಿಲ್ಲದಿರುವುದಾಗಿ ತಿಳಿಸಿದಾಗ ಹಾಜರಿದ್ದ ಸಹಾಯಕ ಅಭಿಯಂತರರು ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತಾಗಿ ಕ್ರಮ ವಹಿಸುವಂತೆ ಸೂಚಿಸುವುದಾಗಿ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಮಸ್ಯೆಗಳ ಬಗ್ಗೆ.**

ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಮಸ್ಯೆಗಳ ಕುರಿತು ಸಭೆಯಲ್ಲಿ ಹಾಜರಿದ್ದ ಶ್ರೀ ಕೆ.ವಿ ಶೆಟ್ಟಿ, ವಿಜಯಾ ಎನ್‌ಕ್ಲೇವ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸಭೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳ ಗೈರು ಹಾಜರಿ ಕುರಿತು ಬೇಸರ ವ್ಯಕ್ತಪಡಿಸಿ ವಿಜಯಾ ಎನ್‌ಕ್ಲೇವ್ ಪ್ರದೇಶದಲ್ಲಿ ಸ್ಯಾನಿಟರಿ ಕೆಲಸ ವ್ಯವಸ್ಥಿತವಾಗಿ ಮಾಡಿಕೊಡುವಂತೆ ಸಭೆಗೆ ಕೋರಿದರು ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಅಭಿಯಂತರರು ತುರ್ತಾಗಿ ಕೆಲಸ ನಿರ್ವಹಿಸಿಕೊಡುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತುರ್ತಾಗಿ ಕ್ರಮ ವಹಿಸುವಂತೆ ಸೂಚಿಸುವುದಾಗಿ ತಿಳಿಸಿದರು.

- **ಆರೋಗ್ಯ ಇಲಾಖೆ.**

ಸಭೆಯಲ್ಲಿ ಹಾಜರಿದ್ದ ಕೆಲ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ವಿಶೇಷವಾಗಿ ಸಾರ್ವಬೌಮನಗರ, ಅಯ್ಯಪ್ಪ ಸ್ವಾಮಿ ದೇವಸ್ಥಾನ ಮತ್ತು ವಿಜಯಾ ಬ್ಯಾಂಕ್ ಲೇಔಟ್‌ನ ಆಟದ ಮೈದಾನದ ಸುತ್ತಮುತ್ತಲಿನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಅವುಗಳ ತಡೆಗೆ ಕ್ರಮವಹಿಸಲು ಕೋರಿದರು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಆಭಿಯಂತರರು ಬೀದಿ ನಾಯಿಗಳ ನಿರ್ವಹಣೆಯ ಜವಾಬ್ದಾರಿಯನ್ನು ಕೆಲ ಸಾಮಜಿಕ ಸಂಸ್ಥೆಗಳು ಬಿ.ಬಿ.ಎಂ.ಪಿ ಪರವಾಗಿ ವಹಿಸಿಕೊಂಡಿದ್ದು ಸದರಿ ಸಂಸ್ಥೆಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು. ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು<br>ಹಾಗೂ ಸಹಾಯಕ ಅಭಿಯಂತರರು | ಅಧ್ಯಕ್ಷರು<br>ಹಾಗೂ ನೋಡಲ್ ಅಧಿಕಾರಿಗಳು |

***ಪ್ರತಿಯನ್ನು:***

1. *ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.*
2. *ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.*
3. *ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.*
4. *ಕಛೇರಿ ಪ್ರತಿ.*